10. ಶಾಸನ ರಚನೆ

ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ

ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕ, 2005.

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, "2005ನೇ ಸಾಲಿನ ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು (ಅನುಬಂಧ - III)

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಐದು ನಿಮಿಷ ಇದರ ಬಗ್ಗೆ ಸದನಕ್ಕೆ ವಿವರಿಸಿ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಇದೊಂದು ಅತ್ಯಂತ ಮಹತ್ವದ ಹಾಗೂ ಸರಳವಾದ ವಿಧೇಯಕ. ನಮ್ಮ ಶಾಸನಸಭೆ ಕನಿಷ್ಠ ಒಂದು ವರ್ಷದಲ್ಲಿ 60 ದಿವಸ ನಡೆಸಬೇಕು. ನಾಲ್ಕು ಅಧಿವೇಶನಗಳನ್ನಾಗಿ ನಾವು ಈ ಶಾಸನಸಭೆಯನ್ನು ನಡೆಸಬೇಕೆಂದು ಒಂದು ರೀತಿಯ ಕರಾರನ್ನು, ಕಡ್ಡಾಯವನ್ನು ನಮ್ಮ ಮೇಲೆ ಹಾಕಿಕೊಳ್ಳಬೇಕೆಂಬ ಉದ್ದೇಶದಿಂದ ಈ ವಿಧೇಯಕವನ್ನು ತರಲಾಗಿದೆ. ಪ್ರಾರಂಭಿಕ ಅಧಿವೇಶನವನ್ನು ಜನವರಿಯ ಎರಡನೇ ವಾರದಲ್ಲಿ ಪ್ರಾರಂಭ ಮಾಡಿ ರಾಜ್ಯಪಾಲರ ಭಾಷಣದೊಂದಿಗೆ ಕನಿಷ್ಠ 15 ದಿವಸ ನಡೆಸಬೇಕು. ಬಜೆಟ್ ಅಧಿವೇಶನ ಮಾರ್ಚ್ ಮೊದಲನೇ ವಾರದಲ್ಲಿ ಆರಂಭಿಸಿ ಕನಿಷ್ಠ 20 ದಿವಸಗಳವರೆಗೆ ನಡೆಸಬೇಕು. ಮಳೆಗಾಲದ ಅಧಿವೇಶನವಾಗಿ ಜುಲೈ ಎರಡನೇ ವಾರದಲ್ಲಿ ಕನಿಷ್ಠ 15 ದಿನಗಳವರೆಗೆ ನಡೆಸಬೇಕು. ಅದೇರೀತಿ ಚಳಿಗಾಲದ ಅಧಿವೇಶನವಾಗಿ ನವೆಂಬರ್ ಎರಡನೇ ವಾರದಲ್ಲಿ ಪ್ರಾರಂಭಿಸಿ ಕನಿಷ್ಠ 10 ದಿನಗಳವರೆಗೆ ಅಧಿವೇಶನ ನಡೆಯಬೇಕು ಎನ್ನುವಂತಹ ಉದ್ದೇಶದಿಂದ ಈ ಒಂದು ವಿಧೇಯಕವನ್ನು ನಾವು ಮಂಡನೆ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ, ಕಳೆದ 20 ವರ್ಷಗಳ ಅಂಕಿಸಂಖ್ಯೆಯನ್ನು ನಾವು ನೋಡಿದರೆ ಯಾವ ವಿಧಾನ ಮಂಡಲಗಳು ನಮ್ಮ ಕರ್ನಾಟಕದಂಥ ಒಂದು ಇತಿಹಾಸವನ್ನು ಹೊಂದಿರತಕ್ಕಂಥಾವು ಒಂದು ನೂರು ದಿವಸದವರೆಗೂ ನಡೆಯುತ್ತಿದ್ದವು. ಸನ್ಮಾನ್ಯ ದೇವರಾಜ ಅರಸುರವರು ಇದ್ದಾಗ ಒಂದು ನೂರು ದಿವಸ ಅಧಿವೇಶನ ನಡೆದಿರತಕ್ಕಂಥ ದಾಖಲೆಗಳು ಇವೆ. ಆದರೆ 1983 ರಿಂದ ಈಚೆಗೆ ಯಾವಾಗಲೂ ನಾವು 51 ದಿವಸಗಳನ್ನು ದಾಟಲಿಲ್ಲ. ನಾನು ತಮ್ಮ ಮಾಹಿತಿಗಾಗಿ ಈ ಅಂಕಿಸಂಖ್ಯೆಗಳನ್ನು ಹೇಳುತ್ತಿದ್ದೇನೆ. 1983ನೇ ಇಸವಿಯೊಳಗೆ 51 ದಿವಸ ನಡೆದರೆ 1984ನೇ ಇಸವಿಯಲ್ಲಿ 52 ದಿವಸ ಅಧಿವೇಶನ ನಡೆದಿದೆ. 8ನೇ ವಿಧಾನಸಭೆಯಲ್ಲಿ 1985ರಲ್ಲಿ 48 ದಿವಸ ನಡೆಯಿತು. 1986ರಲ್ಲಿ 51 ದಿವಸ ನಡೆಯಿತು, 1987ರಲ್ಲಿ 49 ದಿವಸ ನಡೆಯಿತು, 1988 ರಲ್ಲಿ 58 ದಿವಸ ನಡೆಯಿತು, 1989 ರಲ್ಲಿ 26 ದಿವಸ ಆಮೇಲೆ 9ನೇ ವಿಧಾನ ಸಭೆಯಲ್ಲಿ ಸಹ 1989ನೇ ಇಸವಿಯಲ್ಲಿ, ಆಗ 5 ದಿವಸ ಮಾತ್ರ ನಡೆಯಿತು, 1990ನೇ ಇಸವಿಯಲ್ಲಿ 49 ದಿವಸ ನಡೆಯಿತು, 1991ನೇ ಇಸವಿಯೊಳಗೆ 45 ದಿವಸ ನಡೆಯಿತು, 1992ನೇ ಇಸವಿಯೊಳಗೆ 38 ದಿವಸ, 1993ರಲ್ಲಿ 53 ದಿವಸ, 1994ರಲ್ಲಿ 36 ದಿವಸ ಮಾತ್ರ, ನಡೆಯಿತು. 1995ರಲ್ಲಿ 47 ದಿವಸ, 1996ರಲ್ಲಿ 46 ದಿವಸ, 1997ರಲ್ಲಿ 52 ದಿವಸ, 1998ರಲ್ಲಿ 45 ದಿವಸ 1999ರಲ್ಲಿ 10ನೇ ವಿಧಾನ ಸಭೆ ಅವಧಿಯಲ್ಲಿ 31 ದಿವಸ,

ಅದೇ 1999, 11ನೇ ವಿಧಾನ ಸಭೆಯಲ್ಲಿ 9 ದಿವಸ ಅಂದರೆ ಒಟ್ಟು 40 ದಿವಸ, 2000 ಇಸವಿಯಲ್ಲಿ 48 ದಿವಸ, 2001 ರಲ್ಲಿ 37 ದಿವಸ 2002 ರಲ್ಲಿ 46 ದಿವಸ, 2003 ರಲ್ಲಿ 44 ದಿವಸ, 2004 ರಲ್ಲಿ 15 ದಿವಸ ನಡೆಯಿತು ಮುಂದೆ ಚುನಾವಣೆಗಳ ನಂತರ 23 ದಿವಸಗಳನ್ನು ನಾವು 2004ರಲ್ಲಿ ನಡೆಸಿದ್ದೇವೆ. ಈ ರೀತಿ ನಮ್ಮ ಅಧಿವೇಶನದ ಅವಧಿ ಬಹಳ ಕಡಿಮೆಯಾಗಿರತಕ್ಕಂಥಾದ್ದನ್ನು ಗಮನಿಸಿ ನಮ್ಮ ಮೇಲೆ ನಾವು ಕರಾರು ಹಾಕಿ ಕೊಳ್ಳಬೇಕು, ಸರ್ಕಾರದ ಒಂದು ಇಚ್ಛೆಯಂತೆಯೇ ಈ ಅಧಿವೇಶನದ ಅವಧಿ ಇರಬಾರದು, ಹಾಗೆ ಎನ್ನುವಂತಹ ಒಂದು ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಈ ಅಧಿವೇಶನ ಹೆಚ್ಚು ಕಾಲ ಇದ್ದಷ್ಟು ಹೆಚ್ಚು ಜನರನ್ನು ಜಾಗ್ರತರನ್ನಾಗಿ ಇಡುತ್ತೇವೆ. ಅಧಿಕಾರಿಗಳನ್ನು ಜಾಗ್ರತರನ್ನಾಗಿ ಇಡುತ್ತೇವೆ, ಸಮಸ್ಯೆಗಳಿಗೆ ಪರಿಹಾರ ಒದಗಿಸತಕ್ಕಂಥ ಒಂದು ಸೂಕ್ತ ವೇದಿಕೆ ಇದು ಆಗುತ್ತದೆ. ಈ ವೇದಿಕೆಯನ್ನು ಹೆಚ್ಚು ಅರ್ಥಪೂರ್ಣಮಾಡಬೇಕು ಎನ್ನುವ ಒಂದು ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೇವೆ. ದಯಮಾಡಿ ಇದನ್ನು ಒಪ್ಪಬೇಕು ಅಂತ ಹೇಳಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಅವರೇ ಕೊಟ್ಟಂತಹ ಅಂಕಿ ಅಂಶಗಳ ಪ್ರಕಾರ ಕಳೆದ 10 ವರ್ಷದಲ್ಲಿ ಯಾವಾಗಲೂ ಸಹ 50 ದಿವಸವಾದರೂ ಕನಿಷ್ಠ ಅಧಿವೇಶನ ನಡೆದಿಲ್ಲ ಎನ್ನುವಂಥಾದ್ದು ಇಲ್ಲಿ ಬಹಳ ಸ್ಪಷ್ಟವಾಗಿ ಕಾಣುತ್ತದೆ. 60 ದಿವಸ ನಿಶ್ಚಿತವಾದ ತಿಂಗಳುಗಳಲ್ಲಿ ಈ ಅಧಿವೇಶನ ನಡೆಯಬೇಕು ಅಂತ ಏನು ಒಂದು ವಿಧೇಯಕವನ್ನು ತಂದಿದ್ದೀರಿ, ನನಗನ್ನಿಸುತ್ತದೆ, ಇದರಲ್ಲಿ ಏನಾದರೂ ಪೀನಲ್ ಕ್ಲಾಸ್ ಮಾಡಲೇಬೇಕು ಎನ್ನುವುದಕ್ಕೆ ಏನಿದೆ? ಇವತ್ತು ನಮಗೇ ನಾವು, ನೀವೇ ಹೇಳಿದಂತೆ ಒಂದು ಕರಾರು, ಕಡ್ಡಾಯ, ನಿಬಂಧನೆ ಹಾಕಿಕೊಂಡಿದ್ದೇವೆ ಅಂತ ಸಮಾಧಾನ ಪಡುವುದು ಬಿಟ್ಟರೆ ನಾಳೆ ಯಾವುದೋ ಒಂದು ಸರ್ಕಾರ ಇಲ್ಲಿ ಅಧಿಕಾರಕ್ಕೆ ಬಂದಂತಹ ಕಾಲದಲ್ಲಿ ಅವರ ಅನುಕೂಲಕ್ಕೆ ತಕ್ಕಂತೆ ಮಾಡಬಾರದು ಅಂತ ಏನೂ ಇಲ್ಲ. ಇಲ್ಲಿ 60 ದಿವಸವಾದರೂ ಕನಿಷ್ಠ ಪಕ್ಷ ನಡೆಯಬೇಕು ಎನ್ನುವುದಕ್ಕೆ ಏನಾದರೂ ಒಂದು ಪೀನಲ್ ಕ್ಲಾಸ್ ಇದ್ದಿದ್ದರೆ ಆವಾಗ ಈಗ ಏನು ಪಾರ್ಲಿಮೆಂಟರಿ ಸಿಸ್ಟಂನಲ್ಲಿ, ಪಾರ್ಲಿಮೆಂಟ್‌ನಲ್ಲಿ ಏನು ಪ್ರತಿ ಅಧಿವೇಶನ ಇಷ್ಟು ದಿವಸ ನಡೆಯಲೇಬೇಕು ಅಂತ ಕಡ್ಡಾಯ ಮಾಡಿಕೊಂಡು ಅವರು ಮಾಡಿಕೊಂಡು ಬರುತ್ತಿದ್ದಾರೆ, ಆ ರೀತಿ ನೀವು ಏನಾದರೂ ಇದಕ್ಕೆ ಒಂದು ಶಕ್ತಿ ತುಂಬಿದ್ದರೆ ಮಾತ್ರ ಹೆಚ್ಚು ಅರ್ಥ ಬರುತ್ತದೆಯೇ ಹೊರತು ನಾವು 60 ದಿವಸ ಅಲ್ಲದಿದ್ದರೆ 80 ದಿವಸ ಆಗಬೇಕಾಗಿತ್ತು, ಇಡೀ ದೇಶಕ್ಕೆ ಒಂದು ಮಾದರಿಯಾದ ರೀತಿಯಲ್ಲಿ ಅಧಿವೇಶನವನ್ನು ನಾವು ಇಲ್ಲಿ ಮಾಡುತ್ತೇವೆ, ತೋರಿಸುತ್ತೇವೆ, ಹೆಚ್ಚು ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ವೇದಿಕೆಯ ಮೂಲಕ ಜನರ ಸಂಕಷ್ಟವನ್ನು ಪರಿಹರಿಸುವುದಕ್ಕೆ ಹೆಚ್ಚು ದಿವಸಗಳ ಕಾಲ ಕಾರ್ಯಕಲಾಪ ಮಾಡುತ್ತೇವೆ ಎನ್ನುವಂಥಾದ್ದು ಸ್ವಾಗತಾರ್ಹ ಸಂಗತಿ, ಆದರೆ ಇಲ್ಲಿ ನನಗನ್ನಿಸುವಂಥಾದ್ದು ಅಂದರೆ ಇದರಲ್ಲಿ ಎಲ್ಲೂ ಸಹ 'ಮಾಡಲೇಬೇಕು, ಕಡ್ಡಾಯ' ಎನ್ನುವಂಥಾದ್ದಕ್ಕೆ ಅವಕಾಶ ಇಲ್ಲ. ನಮಗೆ ನಾವು ಸಮಾಧಾನ ಮಾಡಿಕೊಂಡು ನಮಗೆ ನಾವು ಒಂದು ಕರಾರು ಹಾಕಿಕೊಂಡಿದ್ದೇವೆ ಎನ್ನುವುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ನಾನು ಅದಕ್ಕೇ ನಿಮಗೆ ಏನು ವಿನಂತಿ ಮಾಡುತ್ತೇನೆಂದರೆ ಪಾರ್ಲಿಮೆಂಟ್‌ನಲ್ಲಿ ಏನು ಒಂದು ನಿಶ್ಚಿತವಾದಂತಹ ತಿಂಗಳುಗಳಲ್ಲಿ ಅಧಿವೇಶನಗಳು, ಚಳಿಗಾಲ ಮತ್ತೊಂದು, ಸಂದರ್ಭಗಳಲ್ಲಿ ನಡೆಯುತ್ತವೆ. ಇದರಲ್ಲಿ

ನೀವು ಹಾಕಿದ್ದೀರಿ, ಆದರೆ ಇದನ್ನು ಮಾಡಲೇಬೇಕು ಅಂತ ಇಲ್ಲ. ನೀವೇ ಹೇಳಿದ ಶಬ್ದಗಳ ಪ್ರಕಾರ ನಮಗೆ ನಾವು ಹಾಕಿಕೊಂಡಿರತಕ್ಕಂಥ ಕರಾರು, ಷರತ್ತು ಎನ್ನುವುದನ್ನು ಬಿಟ್ಟರೆ ಮಾಡದೇ ಇದ್ದರೆ ಏನು? ನಾಳೆ ಬರುವಂತಹ ಒಂದು ಸರ್ಕಾರ ಮಾಡುವುದಿಲ್ಲ. ಆಗ ಇದರಲ್ಲಿ ಏನಾದರೂ ಮಾಡಲೇಬೇಕು ಎನ್ನುವಂತಹ ಷರತ್ತು, ಅದಕ್ಕೆ ಒಂದು ಪೀನಲ್ ಕ್ಲಾಜ್ ಏನಾದರೂ ಇದೆಯೇ ಎಂದರೆ ಇಲ್ಲ ಅಂತ ನನಗನ್ನಿಸುತ್ತದೆ. ಆ ರೀತಿ ತಂದಾಗ ಮಾತ್ರ ಇದೊಂದು ಒಳ್ಳೆಯ ಮಸೂದೆಯಾಗುತ್ತದೆ. ಅದಕ್ಕೆ ಒಂದು ಬೆಲೆ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತೆ ರಾಜಕೀಯ ಇಚ್ಛಾಶಕ್ತಿ ಇದ್ದರೆ ಈ ಬಿಲ್ ಇಲ್ಲದೆಯೇ ನಾವು ಮಾಡಬಹುದು. ಇದುವರೆಗೂ ನಡೆದುಕೊಂಡು ಬಂದಿದೆ. ಆದರೆ ಪ್ರಶ್ನೆ ಇರುವುದು ಏನೆಂದರೆ 60 ದಿವಸ ಅಧಿವೇಶನ ನಡೆಸಬೇಕು ಎಂದು ನಮಗೆ ನಾವು ಒಂದು ಕರಾರು ಹಾಕಿಕೊಂಡು ಇದನ್ನು ನಾವು ಮಾಡುತ್ತೇವೆ ಎನ್ನುವಂತಹ ಒಂದು ಅಭಿಪ್ರಾಯವನ್ನು ಏನು ವ್ಯಕ್ತಪಡಿಸಿದ್ದೀರಿ, ಇದಕ್ಕೆ ಇನ್ನೂ ಹೆಚ್ಚು ಶಕ್ತಿ ತುಂಬುವುದಕ್ಕೆ ಏನಾದರೂ ಆದರೆ, ಆಗ ಯಾವುದೇ ಸರ್ಕಾರ ಬರಲಿ, ಈ ಒಂದು ಕಾಯ್ದೆಯು ಉಪಯೋಗವಾಗುತ್ತದೆ ಮತ್ತು ಇದನ್ನು ನಾವು ಪಾಸ್ ಮಾಡಿದ್ದಕ್ಕೂ ಒಂದು ಅರ್ಥ ಬರುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಆದರೂ ನೀವು 60 ದಿವಸ ಮಾಡಬೇಕು, ಇಂತಹ ತಿಂಗಳಲ್ಲೇ ಇದು ನಿಶ್ಚಿತವಾಗಿ ನಡೆಯಬೇಕು ಎನ್ನುವಂಥಾದ್ದು ಏನಿದೆ ಇದುವರೆಗೂ ಈ ಬಗ್ಗೆ ಯಾರೂ ಚಿಂತನೆ ಮಾಡಿರಲಿಲ್ಲ, ಆದ್ದರಿಂದ ಜನವರಿಯಲ್ಲಿ ಮಾರ್ಚ್‌ನಲ್ಲಿ, ಜುಲೈನಲ್ಲಿ ಮತ್ತು ನವೆಂಬರ್‌ನಲ್ಲಿ ಇಷ್ಟು ದಿವಸ ನಡೆಯಬೇಕು ಎನ್ನುವಂತಹ ಒಂದು ಸಲಹೆ ರೂಪದಲ್ಲಿ ಇದೆಯೇ ಹೊರತು ಇದಕ್ಕೆ ಒಂದು ಬೈಂಡಿಂಗ್ ಏನಾದರೂ ಇದೆ ಅಂತ ನನಗೇನೂ ಅನ್ನಿಸುವುದಿಲ್ಲ. ಆದ್ದರಿಂದ ಇದನ್ನು ಇನ್ನೂ ಹೆಚ್ಚು ಸ್ಟೆಂಗ್ದನ್ ಮಾಡುವುದಕ್ಕೆ ನೀವು ಏನಾದರೂ ಯೋಚನೆ ಮಾಡಬಹುದೇ ಎನ್ನುವ ಬಗ್ಗೆ ದಯಮಾಡಿ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ಆದರೆ ಒಂದೆರಡು ಅಂಶಗಳನ್ನು ಮಾನ್ಯ ಕಾನೂನು ಮಂತ್ರಿಗಳು ನೋಡಬೇಕು. 'ಪರಂತು ರಾಜ್ಯ ಸರ್ಕಾರವು ಸಮಿತಿಯ ಸಲಹೆ ಮೇರೆಗೆ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳು ನಡೆಸುವ ದಿನಗಳ ಸಂಖ್ಯೆಯನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಶಿಫಾರಸ್ಸು ಮಾಡಬಹುದು' ಅಂತಿದೆ. The whole principle will be defeated. 'ಕಡಿಮೆ ಮಾಡಲು' ಎನ್ನುವ ಪದವನ್ನು ನೀವು ಡಿಲೀಟ್ ಮಾಡಿದರೆ ಈ ವಿಧೇಯಕಕ್ಕೆ ಏನಾದರೂ ಶಕ್ತಿ ಉಳಿಯುತ್ತದೆ. ತಾವೇ ಯೋಚನೆ ಮಾಡಿ. ಆ ಕ್ಲಾಸ್‌ನ್ನು ತಾವು ಸೇರಿಸಿ ಈ ಬಿಲ್‌ನ್ನು ಏಕೆ ಮಂಡಿಸುತ್ತಿದ್ದೀರಿ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ತಾವೇ ಸೇರಿಸಿಬಿಟ್ಟಿದ್ದೀರಿ. ಕಡಿಮೆ ಮಾಡಲು ಕೂಡ ಶಿಫಾರಸ್ಸು ಮಾಡಬಹುದು ಅಂದರೆ it is not a mandatory Bill of the Government. ಸರ್ಕಾರದ ಮೇಲೆ ಮ್ಯಾಂಡೇಟ್ ಮಾಡುವಂಥ ಬಿಲ್‌ನ್ನು ನೀವು ಇಲ್ಲಿ ಇಡಲಿಲ್ಲ. ನಿಮ್ಮ ಉದ್ದೇಶ ಏನಿದೆ, ಆ ಒಳ್ಳೆಯ ಉದ್ದೇಶ ಈ ಒಂದು ಕ್ಲಾಸ್‌ನಿಂದ ಡಿಫೀಟ್ ಆಗುತ್ತೆ. ಎರಡನೆಯದು ಅಧ್ಯಕ್ಷರೇ, ಬಜೆಟ್ ಅಧಿವೇಶನ ಮತ್ತೆ ಪ್ರಾರಂಭಿಕ ಅಧಿವೇಶನದ ಮಧ್ಯೆ ತಾವು ಬಜೆಟ್ ಅಧಿವೇಶನ ಏನಾದರೂ ಮಾಡಿ ಇನ್ನೊಂದು 10 ದಿವಸ 15 ದಿವಸ ಜಾಸ್ತಿ ಮಾಡಿಕೊಂಡು ಫೆಬ್ರವರಿ ಕೊನೆ ವಾರದಲ್ಲಿಯಾದರೂ ಆರಂಭ ಮಾಡಿ, ಮಾರ್ಚ್ ಮೊದಲನೇ

ವಾರ ಅಥವಾ ಕೇಂದ್ರ ಸರ್ಕಾರದ ಬಜೆಟ್ ಆದ ತಕ್ಷಣ ನಮ್ಮ ಬಜೆಟ್ ಇಟ್ಟು ಅಲ್ಲಿಂದ ಸತತವಾಗಿ ಒಂದು 20–25 ದಿವಸ ನಡೆಸಿ 30ನೇ ತಾರೀಖು ಒಳಗೆ ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಪದೇ ಪದೇ ಎರಡೆರಡು ಸಲ ಒಂದೊಂದು ವರ್ಷದಲ್ಲಿ ಬಜೆಟ್ ಮೇಲೆ ನಾವು ಕುಳಿತುಕೊಂಡು ಮಾತನಾಡುವುದು, ಡಿಮ್ಯಾಂಡ್ಸ್ ಮೇಲೆ ಮಾತನಾಡುವುದನ್ನು ತಾವು ತಪ್ಪಿಸಬಹುದು, ನೀವು ಒಪ್ಪಿಕೊಂಡಿದ್ದೀರಿ, 90 ದಿವಸದಿಂದ 100 ದಿವಸದವರೆಗೂ ಈ ಅಧಿವೇಶನ ನಡೆಯಬೇಕು, ಅಸೆಂಬ್ಲಿಗಳು ನಡೆಯಬೇಕು ಅಂತ. ಈಗ 60 ದಿವಸಕ್ಕೆ ಅಂತ ಇಟ್ಟಿದ್ದೀರಿ. ಕನಿಷ್ಠ ಇದನ್ನು ನೀವು 75 ದಿವಸಕ್ಕೆ ತೆಗೆದುಕೊಂಡು ಹೋಗಬಹುದಾಗಿತ್ತು. ನನ್ನ ಅಭಿಪ್ರಾಯದಲ್ಲಿ ಜನವರಿ ಎರಡನೇ ವಾರ ಬದಲು ಜನವರಿ ಮೊದಲು ತೆಗೆದುಕೊಂಡು ಫೆಬ್ರವರಿ ಮಧ್ಯದಲ್ಲಿ ಅಥವಾ ಫೆಬ್ರವರಿ ಕೊನೆಯ ವಾರದಲ್ಲಿ ಬಜೆಟ್ ಅಧಿವೇಶನ ಆರಂಭ ಮಾಡಿ, ಯಾವುದೇ ಒಂದು ಅಧಿವೇಶನದಲ್ಲಿ 4–5 ದಿವಸ ಯಾವುದಾದರೂ ಬೇರೆ ಚರ್ಚೆಗಳಿಗೆ ಹೋಗಿಬಿಡುತ್ತದೆ. ಅದನ್ನೆಲ್ಲಾ ನಾವು ಮುಗಿಸಿ ತಕ್ಷಣ ನೀವು ಬಜೆಟ್ ಮಂಡಿಸಿ ಅದಾದ ನಂತರ ಒಂದೇ ಸಲ ಬಜೆಟ್ ಮೇಲೆ ಡಿಮ್ಯಾಂಡ್‌ಗಳ ಮೇಲೆ ಚರ್ಚೆಯಾಗುವುದಕ್ಕೆ ಒಂದು ಅನುಕೂಲ ಮಾಡಿಕೊಡುವುದು ಒಳ್ಳೆಯದು ಅಂತ ನಾನು ಭಾವಿಸಿದ್ದೇನೆ. ತಾವು ಅನುಭವಸ್ಥರು, ಮೊದಲನೇ ವಾರ ಅಂದರೆ ಅದು 7ನೇ ತಾರೀಖು ಆಗಬಹುದು, 8ನೇ ತಾರೀಖು ಆಗಬಹುದು, ನೀವು ಬಿಲ್‌ನಲ್ಲಿಯೇ ಮೊದಲನೇ ವಾರ ಅಂತ ಇಟ್ಟುಕೊಂಡರೆ ಅಲ್ಲಿಂದ ನೀವು ಬಜೆಟ್ ಇಡುವುದೇ 14ನೇ ತಾರೀಖೋ 15ನೇ ತಾರೀಖೋ ಆದರೆ 27–28ನೇ ತಾರೀಖು ಮಾರ್ಚ್ ಒಳಗಡೆ ನಾವು ಬಿಲ್ ಪಾಸು ಮಾಡಲೇಬೇಕು ಎನ್ನುವ ಸ್ಥಿತಿ ನಿರ್ಮಾಣವಾಗುತ್ತದೆ. ಮತ್ತೆ ನೀವು ಈ ತರಹ ಓಟ್‌ಆನ್ ಅಕೌಂಟ್ ತೆಗೆದುಕೊಳ್ಳುವುದು, ಮತ್ತೆ ಇನ್ನೊಂದು ಅಧಿವೇಶನ ಕರೆಯುವುದು, ನಮ್ಮ ಡಿಮ್ಯಾಂಡ್ಸ್ ಪಾಸ್ ಮಾಡಿಕೊಡಿ ಎಂದು ಕೇಳುವ ಪರಿಸ್ಥಿತಿಯನ್ನು ತಪ್ಪಿಸಬೇಕು, ಏಕೆಂದರೆ ಈಗ ಒಂದು ಶಾಸನವನ್ನು ತರುತ್ತಿದ್ದೀರಿ, ಅದು ಪಕ್ಕಾ ಶಾಸನ ಆಗಬೇಕು. ಒಂದು 5–6 ದಿವಸ ಬೇರೆ ಚರ್ಚೆಗೆ ಬಿಟ್ಟು, ಬಜೆಟ್ ಇಟ್ಟು ಅದರ ಮೇಲೆ ಕನಿಷ್ಠ ಒಂದು 20 ದಿವಸ 25 ದಿನವಾದರೂ ಚರ್ಚೆಗೆ ಅವಕಾಶ ಮಾಡಿ ಕಡ್ಡಾಯವಾಗಿ ಮಾರ್ಚಿ 30ನೇ ತಾರೀಖು ಒಳಗೆ ಈ ರಾಜ್ಯದ ಬಜೆಟ್‌ನ್ನು ಪಾಸ್ ಮಾಡುವಂತಹ ಸ್ಥಿತಿಯನ್ನು ತಂದರೆ ಈ ಬಿಲ್‌ಗೆ ಏನಾದರೂ ಪ್ರಾಶಸ್ತ್ಯ ಇರುತ್ತದೆ, ಇದರ ಯಶಸ್ಸು ನಿಮಗೆ ಬರುತ್ತದೆ. ತಾವು ಯೋಚನೆ ಮಾಡಬೇಕು. ಸಾಮಾನ್ಯವಾಗಿ ಜನವರಿ ಎರಡನೇ ವಾರ ಎನ್ನುವುದನ್ನು ಕೂಡ ತಾವು ಪ್ರಿಪೋನ್ ಮಾಡಿ ಇನ್ನೊಂದು 10 ದಿವಸವೋ 15 ದಿವಸವೋ ಜಾಸ್ತಿ ಮಾಡಿ ಫೆಬ್ರವರಿ ಕೊನೆಯ ವಾರದಲ್ಲಿ ಅಸೆಂಬ್ಲಿಯನ್ನು ಸ್ಟಾರ್ಟ್ ಮಾಡಿ ಮಾರ್ಚಿ ಮೊದಲನೇ ವಾರದಲ್ಲಿ ಬಜೆಟ್ ಇಟ್ಟು ಅದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು, ಈ ಕ್ಲಾಸ್ ಅಂತೂ ನೀವು ತೆಗೆಯಲೇಬೇಕು. 'ಹೆಚ್ಚಿಸಲು' ಅಂತ ಇರಲಿ. ಕಡಿಮೆ ಮಾಡಲು ನೀವು ಶಿಫಾರಸ್ಸು ಮಾಡಬಹುದು ಎನ್ನುವ ಒಂದು ಕ್ಲಾಸ್‌ನ್ನು ಇಟ್ಟುಕೊಂಡರೆ the introduction of the entire Bill is not at all required. ಈ ಬಿಲ್‌ನ ಅಗತ್ಯ ಇಲ್ಲವೇ ಇಲ್ಲ ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಮಂತ್ರಿಗಳೇ ತಾವು ಆ ಕ್ಲಾಜ್ ಇರಲೇಬೇಕು ಅಂದರೆ ತಾವು ಈ ಬಿಲ್‌ನ್ನು ವಿತ್‌ಡ್ರಾ ಮಾಡಿಕೊಳ್ಳಿ, ಈ ಬಿಲ್ ಇದ್ದರೆ ಏನು ಇಲ್ಲದಿದ್ದರೆ ಏನು? ಈಗ ಇರುವುದನ್ನೇ ಆಗಲೂ ಉಳಿಸಿಕೊಂಡು ಹೋಗುತ್ತಿರುತ್ತೀರಿ. ಬಿಲ್ ಇಟ್ಟೆವು ಎನ್ನುವುದು, ಮತ್ತು ಬಿಲ್‌ನಲ್ಲಿ ಹೀಗೆ ಸೇರಿಸುವುದು ಇದರಿಂದ ಏನೂ ಆಗುವುದಿಲ್ಲ. ಇಲ್ಲಿ ಅವರು ಹೇಳಿಬಿಟ್ಟಿದ್ದಾರೆ.

The government may enhance or reduce the days ಅಂತ. ದಯಮಾಡಿ ಆ ಕ್ಲಾಸ್‌ನ್ನು ನೋಡಿ ಅದು ಸ್ಪಷ್ಟವಾಗಿದೆ. 'ಹೆಚ್ಚಿಸಲು' ಅಥವಾ 'ಕಡಿಮೆ ಮಾಡಲು' ರಾಜ್ಯ ಸರ್ಕಾರ ಶಿಫಾರಸ್ಸು ಮಾಡಬಹುದು. ಅಂತ ಈ ಬಿಲ್ ಇಟ್ಟ ಮೇಲೆ ಕಡಿಮೆ ಮಾಡುವುದಕ್ಕೆ ಅವಕಾಶ ಕೊಡಬಾರದು. ಹೆಚ್ಚು ಮಾಡುವುದು ಪರಿಸ್ಥಿತಿಯನ್ನು ಅವಲೋಕನ ಮಾಡಿಕೊಂಡು ನೀವು ಮಾಡಿಕೊಳ್ಳಿ. ಈ ಬಿಲ್‌ನಲ್ಲಿ ಮೊಲದು ಮತ್ತು ಎರಡನೆಯ ಅಧಿವೇಶನಗಳು ಏನು ಇದೆ ಇದರಲ್ಲಿ ಎರಡನೇ ಅಧಿವೇಶನವನ್ನು ಒಂದು 8–10 ದಿವಸ ಜಾಸ್ತಿ ಮಾಡಬೇಕು ಮತ್ತು ಮೊದಲನೇ ಅಧಿವೇಶನವನ್ನು ಮೊದಲನೇ ವಾರ ಕರೆಯುವುದಕ್ಕೆ ತಾವು ಬಿಲ್‌ನಲ್ಲಿ ಸೇರಿಸಿ ತಿದ್ದುಪಡಿ ಮಾಡಬೇಕು ಅಂತ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ತಂದಿರತಕ್ಕಂಥ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಅವರ ಉದ್ದೇಶ ಬಹಳ ಒಳ್ಳೆಯ ಉದ್ದೇಶ. ಆ ಒಳ್ಳೆಯ ಉದ್ದೇಶದಲ್ಲಿ ಎಲ್ಲೋ ಒಂದು ಕಡೆ ಸ್ವಲ್ಪ ತೀರಾ ಜಾಸ್ತಿ ವಿಶಾಲವಾದ ಮನೋಭಾವನೆಯನ್ನು ನೀವು ಇಟ್ಟುಕೊಂಡಿಲ್ಲ. ಉದ್ದೇಶ ಏನೇ ಒಳ್ಳೆಯದೇ ಆದರೆ ಅದು ವಿಶಾಲವಾಗಿರಬೇಕು. ನನ್ನ ವಾದದ ಪ್ರಕಾರ ಮೊದಲಿನಿಂದಲೂ ವರ್ಷಕ್ಕೆ ಕನಿಷ್ಠ 100 ದಿನಗಳು ಶಾಸನಸಭೆಗಳು ನಡೆಯಬೇಕು ಎಂದು ನಾವು ಹೇಳುತ್ತಿದ್ದೆವು. ಹಿಂದೆ ಅದೇ ಸ್ಥಾನದಲ್ಲಿ ಕುಳಿತಿದ್ದಂತಹ ಅನೇಕ ಹಿರಿಯರು, ಅಧ್ಯಕ್ಷರುಗಳು ಶಾಸನಸಭೆ. 100 ದಿನ ನಡೆಯಬೇಕೆಂದು ಪ್ರತಿಪಾದನೆ ಮಾಡಿದ್ದಾರೆ. ಈಗ ನೀವು ಮಾಡಿರತಕ್ಕದ್ದರಲ್ಲಿ 60 ದಿನ ಎನ್ನತಕ್ಕದ್ದು ಏನು ಎಂದರೆ, ಕನಿಷ್ಠ 60 ದಿನ ಎನ್ನುವುದನ್ನು ಒಂದು ವಿಧೇಯಕವನ್ನೇ ಮಾಡಿದಿರಿ. ಬಹಳ ಸಂತೋಷ. ಇದುವರೆಗೆ ಇದಕ್ಕೆ ಒಂದು ವಿಧೇಯಕ ಇರಲಿಲ್ಲ. ಯಾವಾಗ ಬೇಕಾದರೂ ಕರೆಯಬಹುದು, ಯಾವಾಗ ಬೇಕಾದರೂ ಬಿಡಬಹುದು ಎನ್ನತಕ್ಕಂಥ ಪ್ರಶ್ನೆ ಇತ್ತು. ಈಗ ನೀವೇನು ಮಾಡುತ್ತೀರಿ? ಇಂತಿಂಥ ತಿಂಗಳು ಶಾಸನಸಭೆ ಕರೆಯಬೇಕು ಎನ್ನತಕ್ಕದ್ದು ಸ್ಪಷ್ಟ ಮಾಡಿದ್ದೀರಿ. ಅದು ಒಳ್ಳೆಯದು. ಆದರೆ 'ಸಾಮಾನ್ಯವಾಗಿ' ಎಂದೇನು ಹೇಳಿದ್ದೀರಿ, ಅದನ್ನು ಬಿಟ್ಟು ಬಿಡಿ. 'ಕಡ್ಡಾಯವಾಗಿ ಜನವರಿ ತಿಂಗಳು' ಎಂದು ನೀವು ಅದನ್ನು ಸ್ಪಷ್ಟಪಡಿಸಬೇಕು. 'ಸಾಮಾನ್ಯವಾಗಿ' ಎಂದಾಗ ಏನಾಯಿತು ಎಂದರೆ, ಸಾಮಾನ್ಯವಾಗಿ ಕರೆಯಬಹುದು, ಕರೆಯದೇ ಇರಬಹುದು. ಸಾಮಾನ್ಯವಾಗಿ ಜನವರಿ, ಸಾಮಾನ್ಯವಾಗಿ ಫೆಬ್ರವರಿ, ಸಾಮಾನ್ಯವಾಗಿ ಜುಲೈ, ಸಾಮಾನ್ಯವಾಗಿ ನವೆಂಬರ್ ಎಂದು ಹೇಳಿಬಿಟ್ಟಿರಿ. ಆದರೆ ಕಡ್ಡಾಯವಾಗಿ ನವೆಂಬರ್ ತಿಂಗಳಲ್ಲಿ, ಕಡ್ಡಾಯವಾಗಿ ಜುಲೈ ತಿಂಗಳಲ್ಲಿ ಈ ತರಹ ಸ್ಪಷ್ಟತೆ ನಿಮ್ಮಲ್ಲಿ ಇರಬೇಕು. ಇದು ಒಂದು. ಎರಡನೇಯದು, 100 ದಿನ ಎನ್ನುವುದರಲ್ಲಿ 20 ದಿನ ಜಂಟಿ ಅಧಿವೇಶನ, ರಾಜ್ಯಪಾಲರ ಭಾಷಣ ಇರಬೇಕು. ಇದಕ್ಕೆ 20 ದಿನಗಳು ಕಡ್ಡಾಯವಾಗಿ ಇರಲೇಬೇಕು. ಅದರಲ್ಲಿ ಸಾಮಾನ್ಯ ಚರ್ಚೆ, ಮತ್ತು ಅನೇಕ ವಿಚಾರಗಳು ಬರುವುದು 20 ದಿವಸಗಳಲ್ಲಿ ಮತ್ತು ಫೆಬ್ರವರಿ ಮೊದಲನೇ ವಾರ ನೀವು ಕರೆಯಬೇಕು. ಜನವರಿಯಲ್ಲಿ ಕರೆದ ತಕ್ಷಣ ನೀವು ಎಲ್ಲಿಗೆ ಹೊರಟುಹೋದಿರಿ? ತೀರಾ ಮಾರ್ಚ್‌ಗೆ ಹೊರಟು ಹೋಗಿಬಿಟ್ಟಿರಿ. ಜನವರಿಗೆ ನೀವು ರಾಜ್ಯಪಾಲರ ಭಾಷಣ ಕರೆದು, ಜನವರಿ, ಫೆಬ್ರವರಿ ಬಿಟ್ಟು ಮಾರ್ಚ್‌ಗೆ ಹೊರಟು ಹೋಗಿ ಬಿಟ್ಟಿರಿ. ಅದು ಒಳ್ಳೆಯದಲ್ಲ. ರಾಜ್ಯಪಾಲರ ಭಾಷಣ ಎಂದು ಹೇಳಿದರೆ ಹೊಸ ವರ್ಷದ ಆರಂಭದಲ್ಲಿ ರಾಜ್ಯಪಾಲರ ಭಾಷಣ, ಅದು ಜಂಟಿ ಅಧಿವೇಶನ. ಇಲ್ಲಿ ಬಂದು ಮಾನ್ಯ ರಾಜ್ಯಪಾಲರು ಭಾಷಣ ಮಾಡತಕ್ಕದ್ದು

ಒಂದು ಶುಭೋದಯ. ಅದಾದ ನಂತರ ಮಾಡಬೇಕಾದ ಕರ್ತವ್ಯ ಎಂದರೆ ರಾಜ್ಯದ ಆಯವ್ಯಯ ಮಂಡನೆ. ರಾಜ್ಯದ ಆಯವ್ಯಯ ಮಂಡನೆಗೂ ರಾಜ್ಯಪಾಲರ ಭಾಷಣಕ್ಕೂ ಎರಡು ತಿಂಗಳು ಅಂತರ ಇರತಕ್ಕದ್ದು ಎಲ್ಲೂ ಇಲ್ಲ. ಆದ್ದರಿಂದ ತಮಗೆ ನಾನು ಏನು ಹೇಳುತ್ತೇನೆಂದರೆ ಜನವರಿ ಮೊದಲನೇ ವಾರ ರಾಜ್ಯಪಾಲರ ಭಾಷಣ. ಅದು ಸುಮಾರು 20 ದಿನಗಳ ಕಾಲ. ಅದರ ನಂತರ ಫೆಬ್ರವರಿ ಮೊದಲನೇ ವಾರವೇ ತಾವು ಆಯವ್ಯಯವನ್ನು ಮಂಡಿಸಬೇಕು. ಆಯವ್ಯಯವನ್ನು ಮಂಡಿಸಿ 40 ದಿನಗಳ ಕಾಲ ಆ ಒಂದು ಆಯವ್ಯಯಕ್ಕೆ ಅವಕಾಶ ಕೊಡಬೇಕು. ನಂತರ ನೀವು ಎರಡು ಚಳಿಗಾಲದ ಅಧಿವೇಶನ ಹೇಳುತ್ತಿದ್ದೀರಿ. ಒಂದು ಜುಲೈ ತಿಂಗಳಲ್ಲಿ, ಇನ್ನೊಂದು ನವೆಂಬರ್ ತಿಂಗಳಲ್ಲಿ. ಆ ನವೆಂಬರ್ ಜುಲೈನಲ್ಲಿ 20 ದಿವಸ, 20 ದಿವಸ ಹೀಗೆ ಒಟ್ಟು 100 ದಿನಗಳ ಕಾಲ ಕರೆಯತಕ್ಕದ್ದು, ನಿಜಕ್ಕೂ ಒಳ್ಳೆಯದು. ಆ ಕೆಲಸವನ್ನು ತಾವು ಮಾಡಬೇಕು. ಇದು 1967ರಿಂದ ಇಲ್ಲಿಯವರೆಗೆ ಬಂದಿರತಕ್ಕದ್ದನ್ನು ಸರಾಸರಿ ತೆಗೆದುಕೊಂಡರೆ 75 ದಿವಸ ಆಗುತ್ತದೆ. ತಾವು 1967ರಿಂದ ತೆಗೆದುಕೊಳ್ಳಿ. ಸರಾಸರಿ 67 ರಿಂದ 85 ದಿವಸ ನಡೆದಿರುವುದು ಉಂಟು. 90 ದಿವಸ ನಡೆದಿರುವುದನ್ನು ತಾವು ಸ್ವಲ್ಪ ಸ್ಪಷ್ಟವಾಗಿ ನೋಡಿ, ನನ್ನದೇನೂ ಅಭ್ಯಂತರ ಇಲ್ಲ. ನಾನು ನೋಡಿದ್ದೇನೆ. ಜೊತೆಗೆ ಈ ಮಸೂದೆಯಲ್ಲಿ 75 ರಿಂದ 100 ದಿನಗಳು ಎಂದು ತಾವು ಹೇಳಿ. ಇದೊಂದು ಎರಡನೆಯದು ಇದು ಶಾಸನಸಭೆ. ನನ್ನ ದೃಷ್ಟಿಯಲ್ಲಿ ಲೋಕಸಭೆ, ರಾಜ್ಯಸಭೆ ಬೇರೆ. ಅಲ್ಲಿ ರಾಜ್ಯಸಭೆಯಲ್ಲಿ ಅಧ್ಯಕ್ಷರಾದವರು ಉಪ ರಾಷ್ಟ್ರಪತಿ, ಆದ್ದರಿಂದ ಮೇಲ್ಮನೆ ಎಂದು ಅದನ್ನು ಹೇಳುತ್ತಾರೆ. ಸಂವಿಧಾನ ಬದ್ಧವಾಗಿ ಅದು ಮೇಲ್ಮನೆ. ಕಾರಣವೇನು? ಉಪರಾಷ್ಟ್ರಪತಿ ಆಗತಕ್ಕವರೇ ಅಲ್ಲಿ ಅಧ್ಯಕ್ಷತೆಯನ್ನು ವಹಿಸತಕ್ಕಂಥಾದ್ದು. ಇಲ್ಲಿ ನಮ್ಮಲ್ಲಿ ವಿಧಾನ ಪರಿಷತ್ತಿನಲ್ಲಿ ಮಾನ್ಯ ರಾಜ್ಯಪಾಲರು ಬಂದು ಅಧ್ಯಕ್ಷರೆ ವಹಿಸುವುದಿಲ್ಲ. ಆದ್ದರಿಂದ ನರ್ವೋಚ್ಚವಾಗಿ ಇದು ಶಾಸನಸಭೆ. ಇತ್ತೀಚಿನ ದಿನಗಳಲ್ಲಿ ವಿಧಾನ ಪರಿಷತ್ತಿನ ಅಧ್ಯಕ್ಷರು : ಸಭಾಪತಿಗಳು, ಎಂದು ವಿಧಾನ ಪರಿಷತ್ತಿಗೆ ಸಂಪೂರ್ಣವಾಗಿ ಅದಕ್ಕೆ ಹೆಚ್ಚಿನ ಮಾನ್ಯತೆ ಕೊಡತಕ್ಕದ್ದನ್ನು ನಾನು ಒಪ್ಪುವುದಿಲ್ಲ. ಇಲ್ಲಿ ನಾನು ಷ್ಪಷ್ಟವಾಗಿ ಹೇಳುತ್ತಿದ್ದೇನೆ. ಇಲ್ಲಿ ನಮ್ಮ ಅಧ್ಯಕ್ಷರು, ಇದ್ದು ಈ ಶಾಸನಸಭೆಯೇ ಎಲ್ಲಾ ವಿಚಾರದಲ್ಲೂ ಇದು ನಮ್ಮ ದೃಷ್ಟಿಯಲ್ಲಿ ಮೇಲ್ಮನೆ ಅಂತ.... ನಮ್ಮ ದೃಷ್ಟಿಯಲ್ಲಿ ಮೇಲ್ಮನೆ, ಕೆಳಮನೆ ಎನ್ನತಕ್ಕ ಪ್ರಶ್ನೆ ರಾಜ್ಯಗಳಿಗೆ ಬರುವುದಿಲ್ಲ. ಅಲ್ಲಿ ಉಪರಾಷ್ಟ್ರಪತಿ ಅವರು ಬರುವುದರಿಂದ ಅಲ್ಲಿಗೆ ಮೇಲ್ಮನೆ ಎನ್ನತಕ್ಕದ್ದು ಸಂವಿಧಾನ ಬದ್ಧವಾಗಿದೆ. ಇಲ್ಲಿ ಮೇಲ್ಮನೆ, ಕೆಳಮನೆ ಎಂದು ಸಂವಿಧಾನ ಬದ್ಧವಾಗಿದೆ ಎಂದು ನಾನಂತೂ ಅಂದುಕೊಳ್ಳುವುದಕ್ಕೆ ತಯಾರಾಗಿಲ್ಲ. ಆದ್ದರಿಂದ ಸಭಾಪತಿ ಎನ್ನತಕ್ಕವರು ಇಲ್ಲಿ ಭಾರೀ ಎತ್ತರ ಆಗಿದ್ದು, ನಮ್ಮ ಶಾಸನಸಭೆಯ ಅಧ್ಯಕ್ಷರು ಎಲ್ಲೋ ಒಂದು ಹಂತದಲ್ಲಿ ಕೆಳಗಡೆ ಬರತಕ್ಕಂಥ ರೀತಿಯಲ್ಲಿ ಇತ್ತೀಚಿನ ಪ್ರಸಂಗಗಳು, ಆಹ್ವಾನಪತ್ರಿಕೆಗಳು, ಸಭೆ–ಸಮಾರಂಭಗಳು, ನಡೆಯುತ್ತಿರತಕ್ಕದ್ದನ್ನು ನಾನು ಒಪ್ಪುವುದಿಲ್ಲ ಆದ್ದರಿಂದ ಇಡೀ ಸದನದ ಪರವಾಗಿ ನಾನು ಅತ್ಯಂತ ಕಳಕಳಿಯಿಂದ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ಇದು ಸರ್ವೋಚ್ಚ. ಜನರಿಂದ ಆಯ್ಕೆಯಾಗಿ, ಚುನಾಯಿತ ಪ್ರತಿನಿಧಿಗಳು ನೇರವಾಗಿ ಬಂದಿರತಕ್ಕದ್ದು ಇದು ಸರ್ವೋಚ್ಚ. ಆದ್ದರಿಂದ ನಮ್ಮ ಅಧ್ಯಕ್ಷರು ಯಾರು ಇದ್ದಾರೆ, ಯಾವುದೇ ವಿಧಾನ ಮಂಡಲದ ಯಾವುದೇ ವಿಚಾರ ಬಂದಾಗ ಇದು ಸರ್ವೋಚ್ಚ. ಕೆಲವು ರಾಜ್ಯಗಳಲ್ಲಿ ಇದನ್ನು ರದ್ದು ಮಾಡಿದ್ದಾರೆ. ನಾನು ಇದನ್ನು ರದ್ದು ಮಾಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ರಾಜ್ಯಗಳಲ್ಲಿ ಇಲ್ಲವೇ ಇಲ್ಲ. ವಿಧಾನಪರಿಷತ್ ತಮಿಳುನಾಡಿನಲ್ಲಿ ಇಲ್ಲ, ಪಶ್ಚಿಮ ಬಂಗಾಳದಲ್ಲಿ ಇಲ್ಲ, ಆಂಧ್ರದಲ್ಲೂ ಇಲ್ಲ.

ಇದು ಇರುವುದೇ ಐದು ಕಡೆಗಳಲ್ಲಿ ಅಲ್ಲಿ ನಾವು ಯಾರನ್ನು ಮೇಲ್ಮನೆ ಎಂದು ಹುಡುಕುತ್ತೇವೆ. ಮಾನ್ಯ ಪ್ರಕಾಶ್ ಅವರೇ, ತಾವೆಲ್ಲಾ ಸ್ವಲ್ಪ ಹಿರಿಯರು, ಅನುಭವಸ್ಥರು. ಈ ರಾಜ್ಯದ ನಮ್ಮ ಸದನವನ್ನು ತೀರಾ ನಾವು ಎಲ್ಲೋ ಆ ಮಟ್ಟಕ್ಕೆ ತೆಗೆದುಕೊಂಡು ಹೋಗುವುದು ಬೇಡ. ಈ ಸದನಕ್ಕೆ ಅಪಾರವಾದಂತಹ ಶಕ್ತಿ ಇದೆ. ಆ ಸದನವನ್ನು ನಾನು ಅಲ್ಲಗಳೆಯುತ್ತಿದ್ದೇನೆ ಅಂತಲ್ಲ. ಶ್ರೀ ಕೆ.ಟಿ. ಭಾಷ್ಯಂ ಅವರು ಇದ್ದರು. ಆ ಸದನದಲ್ಲಿ ಅನೇಕ ಅನುಭವಿಗಳು ಇದ್ದರು. ಅದೆಲ್ಲಾ ನನಗೆ ಗಮನ ಇದೆ. ಆದರೆ ಎಲ್ಲೂ ಸಂವಿಧಾನದಲ್ಲಿ ಅದು ಮೇಲ್ಮನೆ, ಇದು ಕೆಳಮನೆ ಎಂದಿಲ್ಲ. ಆದ್ದರಿಂದ ಇಲ್ಲಿ ಅಧ್ಯಕ್ಷರಾದವರು ತೀರಾ ಇಲ್ಲಿ ಕೆಳಗೆ ಬರಬೇಕು, ಸಭಾಪತಿ ಆದವರು ಮೇಲೆ ಬರಬೇಕು ಎಂದು ಆ ಭಾವನೆಗಳು ಬರುವುದಕ್ಕೆ ಸಾಧ್ಯ ಇಲ್ಲ. ಬರೆ ಒಂದೇ ಒಂದು ಲೋಕಸಭೆ, ರಾಜ್ಯಸಭೆಯಲ್ಲಿ ಬಂದಾಗ ರಾಜ್ಯಸಭೆಯ ಅಧ್ಯಕ್ಷರು ಅಧ್ಯಕ್ಷತೆಯನ್ನೂ ವಹಿಸುತ್ತಾರೆ, ಅವರು ರಾಷ್ಟ್ರದ ಉಪ ರಾಷ್ಟ್ರಪತಿಗಳೂ ಆಗಿರುತ್ತಾರೆ. ಆದ್ದರಿಂದ ಅವರಿಗೆ ಸ್ವಲ್ಪ ಅಲ್ಲಿ ಮೇಲ್ಮನೆ ಎನ್ನತಕ್ಕ ವಾದ ಇದೆ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಯಾವ ಕಾರಣಕ್ಕೂ ಈ ಸಭೆ ಸರ್ವೋಚ್ಚ. ಈ ಸಭೆಯ ಅಧ್ಯಕ್ಷರು ಅತ್ಯಂತ ಎತ್ತರದಲ್ಲಿರುತ್ತಾರೆ. ಎಲ್ಲಾ ಸಂದರ್ಭದಲ್ಲೂ ಸಂಪೂರ್ಣವಾಗಿ ಈ ಸಭೆಯ ಅಧ್ಯಕ್ಷರಿಗೆ ಮೊದಲನೇ ಮಾನ್ಯತೆ ಕೊಡಬೇಕಾದ್ದು ಆದ್ಯ ಕರ್ತವ್ಯ. ಇದರ ಜೊತೆಗೆ ಸದಸ್ಯರುಗಳಿಗೆ ಕುಳಿತುಕೊಳ್ಳುವುದಕ್ಕೆ ಜಾಗದ ಬಗ್ಗೆ. ಅಲ್ಲಿ ಪಾರ್ಲಿಮೆಂಟಿನಲ್ಲಿ ಸೆಂಟ್ರಲ್ ಹಾಲ್ ಎಂದು ಇದೆ. ಇಲ್ಲಿ ನಾವೆಲ್ಲಿ ಕುಳಿತುಕೊಳ್ಳೋಣ? ಇಲ್ಲಿ ಯಾವ ಹಾಲೂ ಇಲ್ಲ. ನಾವು ಸದಸ್ಯರುಗಳು ಬಂದವರ ಜೊತೆಯಲ್ಲಿ ಮಾತನಾಡುವುದಕ್ಕೆ. ಆ ಕಡೆಗೆ ಹೋಗಬೇಕು ಅಥವಾ ಈ ಕಡೆಗೆ ಹೋಗಬೇಕು. ಅದೆಲ್ಲೋ ಹಿಂದೆ ಒಂದು ತೀರ್ಮಾನ ಇತ್ತು. ಇದರ ಮಧ್ಯನೋ ಆ ಕಡೆನೋ ಒಂದು ಸೆಂಟ್ರಲ್ ಹಾಲ್ ತರಹ ಒಂದು ದೊಡ್ಡ ಸಭಾ ಭವನ ಕಟ್ಟಬೇಕು ಎನ್ನುವ ಉದ್ದೇಶ ಇತ್ತು. ಅದರ ಬಗ್ಗೆ ತಾವು ಚಿಂತನೆ ಮಾಡಿ. ಒಂದು ಸೆಂಟ್ರಲ್ ಹಾಲ್ ಬಗ್ಗೆ ಚಿಂತನೆ ಮಾಡಬೇಕು. ಆ ಪರಿಸ್ಥಿತಿಯಲ್ಲಿ ಒಂದು ಒಳ್ಳೆಯ ಸಭಾ ಭವನ ಇರಬೇಕು. ಶಾಸಕರು ಬಂದಾಗ, ಅಲ್ಲಿ ಹೋಗಿ ಕುಳಿತು ಮಾತನಾಡುವುದಕ್ಕೆ, ಬೇರೆ ಜನ ಬಂದಾಗ ಮಾತುಕತೆ ಆಡುವುದಕ್ಕೆ ಪ್ರತಿ ಒಂದಕ್ಕೂ ಅದು ಬೇಕಾಗುತ್ತದೆ. ಅದರ ಬಗ್ಗೆ ತಾವು ಸಂಪೂರ್ಣವಾಗಿ, ತೀವ್ರವಾಗಿ ಗಮನ ಕೊಡಿ. ಈಗ ಪಕ್ಕದಲ್ಲಿ ಆ ವಿಕಾಸಸೌಧ ಭೂತ ಬರುವ ಬದಲು ಈ ಒಂದು ಸಭಾ ಭವನವನ್ನು ಇಲ್ಲೇನಾದರೂ ಮಾಡಿದ್ದರೆ ಚೆನ್ನಾಗಿತ್ತು. ನನಗೇನೋ ಅದು ಅರ್ಥವೇ ಇಲ್ಲ. ಅದನ್ನು ನೀವು ಏಕೆ ತಂದಿರೋ? ಅದನ್ನು ಏಕೆ ಕಟ್ಟಿದಿರೋ? ಅದನ್ನು ಕಟ್ಟಿದ ಘಳಿಗೇನೂ ಸರಿ ಇಲ್ಲ. ನನಗಂತೂ ಅದನ್ನು ನೋಡಿದರೇ ಭಯ ಬರುತ್ತದೆ. ಈ ಸದನಕ್ಕೆ ನೀವು ಎಷ್ಟೇ ಕಟ್ಟಡ ಕಟ್ಟಿದರೂ ಅದಕ್ಕೆ ಹೆಚ್ಚಿನ ಶಕ್ತಿ, ಗೌರವ ಇರುತ್ತದೆ. ಇದಕ್ಕೆ ಇರತಕ್ಕ ಒಂದು ಅಂತರದಲ್ಲಿ ನೋಡಿದಾಗ, ಅಲ್ಲಿ ಪಕ್ಕದಲ್ಲಿ ಹೋಗಿ ನೋಡಿದರೆ ಅದು ಯಾವುದೋ ಒಂದು ಕಟ್ಟಡ ಎಂದು ಅನಿಸುತ್ತದೆ. ಆ ಕಟ್ಟಡ ಏಕೆ ಬೇಕು? ನಮಗೆ ಬೇಕಾಗಿರಲಿಲ್ಲ. ಅದಕ್ಕೆ ವಿಕಾಸಸೌಧ ಎಂದು ಹೆಸರು. ಏಕೆ ಬೇಕಾಗಿತ್ತು ಅದು? ಇಲ್ಲಿ ನಮಗ್ಯಾಕೆ ಬೇಕಾಗಿತ್ತು? ಅಲ್ಲಿರತಕ್ಕಂಥ ಅನೇಕ ಕಟ್ಟಡಗಳು....

ಶ್ರೀ ಜೆ.ಸಿ. ಮಾಧುಸ್ವಾಮಿ : ಬಿಲ್ ಬಗ್ಗೆ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಬರುತ್ತೇನೆ. ಸಭಾ ಭವನಕ್ಕೆ ಬಂದಾಗ ಅದಕ್ಕೂ ಬರಬೇಕಾಗುತ್ತದೆ. ಬಿಲ್ಲೂ, ಬಾಣ ಎಲ್ಲಾ ನನಗೆ ಗೊತ್ತಿದೆ. ಆದ್ದರಿಂದ ಅಧ್ಯಕ್ಷರೆ, ದಯಮಾಡಿ

ನನಗೆ ಅನ್ನಿಸುತ್ತದೆ. ಈ ಬಗ್ಗೆ ನಾವು ಎಲ್ಲೋ ಒಂದು ಕಡೆ ಈ ಸಂದರ್ಭದಲ್ಲಿ ನೋಡಿದರೆ ಎಂಥೆಂಥ ಕಟ್ಟಡಗಳು ಅಲ್ಲಿ ಹೊರಟು ಹೋದವು. ಇತಿಹಾಸ ಪ್ರಸಿದ್ಧವಾದಂತಹ ಕಟ್ಟಡಗಳೆಲ್ಲಾ ನೆಲಸಮ ಆದವು. ಆದ್ದರಿಂದ ಈ ಸದನದಲ್ಲಿ ಶಾಸಕರಿಗೆ ಸಂಪೂರ್ಣವಾಗಿ ಅವರಿಗೇ ಆದಂತಹ ಒಂದು ಸಭಾ ಭವನ ಬೇಕು. 100 ಜನ ನಡೆಯುವಾಗ ಸಭಾ ಭವನ ಬೇಕು. ಸಭಾ ಭವನ ಹೇಳಬಹುದಾ? ಅದು ಬಿಲ್‌ನಲ್ಲಿ ಬರುತ್ತದಾ? ಸರಿ, ಸಭಾ ಭವನ ಒಂದು ಬರಬೇಕಾಗುತ್ತದೆ. ಅದು ಈ ಬಿಲ್‌ನಲ್ಲಿ ಬರುತ್ತದೆ. ಆದ್ದರಿಂದ ಒಂದು ಸಭಾ ಭವನ ಬೇಕೇ ಬೇಕು. ಆ ಸಭಾ ಭವನ ಕಡ್ಡಾಯವಾಗಿ ಬೇಕಾಗಿದೆ. ಮತ್ತು ಅನೇಕ ಪಕ್ಷದ ಮುಖಂಡರುಗಳೆಲ್ಲ ಇದ್ದಾರೆ. ಅನೇಕ ಸಾರಿ ತಮಗೆ ಹೇಳಿದ್ದೇವೆ. ಅವರುಗಳಿಗೆ ಒಂದೊಂದು ಕಾರ್ಯಾಲಯ ಕೊಡಬೇಕು ಎಂದು ಹೇಳಿದ್ದೇವೆ. ಅದನ್ನೂ ಕೂಡ ಈ ಸದನ ಮುಗಿಯುವುದರೊಳಗಾಗಿ ಸಂಪೂರ್ಣವಾಗಿ ಮಾಡಿಕೊಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮಗೆ ತಿಳಿಸುತ್ತೇನೆ. ಆಮೇಲೆ ಶಾಸಕರಿಗೆ, ಒಂದು ದೊಡ್ಡ ಪುಸ್ತಕ ಭಂಡಾರ ಬೇಕು ಎಲ್ಲೋ ಒಂದು ಕಡೆಗೆ, ಮೂಲೆಯಲ್ಲಿ ಹೋಗಿ ಕುಳಿತುಕೊಳ್ಳುತ್ತೇವೆ ಎಲ್ಲೋ ಓದುತ್ತೇವೆ. ಎಲ್ಲೋ ಬರುತ್ತೇವೆ. ಪತ್ರಿಕೆಗಳಿರುವ ವಾಚನಾಲಯ ದೊಡ್ಡದಾಗಿ ಇರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ನೀವು ಏನೂ ಕೊಡದಿದ್ದರೂ ಚಿಂತೆಯಿಲ್ಲ ಇಲ್ಲಿರುವುದೇ ಎರಡು ಶೌಚಾಲಯಗಳು ಅದಕ್ಕೇನು ಬಿಡುವೇ ಇಲ್ಲ, ಒಂದು ಕಡೆ ಪತ್ರಕರ್ತರು, ಇನ್ನೊಂದು ಕಡೆ ಶಾಸಕರು, ಅಧಿಕಾರಿಗಳು ಅಂತ ಒಂದೇ ಸಮನೆ ಅಲ್ಲಿ ಬಿಡುವೇ ಇರುವುದಿಲ್ಲ. ಇದನ್ನು ಸ್ವಲ್ಪ ಗಮನಿಸಿ ರಾಜ್ಯಕ್ಕೆ ನೀವು ಶೌಚಾಲಯ ಕೊಡದೇ ಇದ್ದರೂ, ಗ್ರಾಮಾಂತರ ಪ್ರದೇಶಕ್ಕೆ ಶೌಚಾಲಯ ಕೊಡದೇ ಇದ್ದರೂ, ಶಾಸಕರುಗಳಿಗೆ...

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮಗೆ ನಿರ್ಮಲ ಶೌಚಾಲಯ ಬೇಕೋ ಅಥವಾ ದುಡ್ಡುಕೊಟ್ಟು ಒಳಹೋಗುವ ಸುಲಭ್ ಶೌಚಾಲಯ ಬೇಕೋ?

ಶ್ರೀ ವಾಟಾಳ್ ನಾಗರಾಜ್ : ನಿಜವಾದ ಶೌಚಾಲಯ ಬೇಕು. ಆದ್ದರಿಂದ ರಾಜ್ಯದ ಜನರಿಗೆ, ಗ್ರಾಮಾಂತರ ಪ್ರದೇಶಗಳಿಗೆ ಶೌಚಾಲಯ ಕೊಡದಿದ್ದರೂ ಕನಿಷ್ಠ ಪತ್ರಕರ್ತರಿಗೆ, ಶಾಸಕರಿಗೆ ಸಿಬ್ಬಂದಿಗಳಿಗೆ ಇರುವಂಥಾದ್ದು – ಇದು ಸ್ವಲ್ಪ ಚೆನ್ನಾಗಿರಲಿ, ಅಗಲವಾಗಿ ಇರಲಿ ಮತ್ತು ಇನ್ನೊಂದು ನಾಲ್ಕೈದು ತಾವು ಮಾಡಬೇಕು ಅಂತ ಹೇಳಿ, ಈ ಬಿಲ್‌ನಲ್ಲಿ ಆ ಶೌಚಾಲಯ ಇಲ್ಲ. ಆದರೂ ಮಾಧುಸ್ವಾಮಿಯವರನ್ನು ಕೇಳಿ ಶೌಚಾಲಯದ ಕಥೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಇದರಲ್ಲಿ ಬಹಳ ಪ್ರಮುಖವಾಗಿ ಇವತ್ತು ಬಜೆಟ್ ಅಧಿವೇಶನ ಏನು ನಿಗದಿ ಮಾಡಿದ್ದೀರಿ ಅದರ ಕಾಲಾವಧಿಯನ್ನು ಹೆಚ್ಚು ಮಾಡಬೇಕು ಮತ್ತು ಲೇಖಾನುದಾನ ಪಡೆಯುವ ಸಂಪ್ರದಾಯವನ್ನು ಬಿಟ್ಟು ರೆಗ್ಯುಲರ್ ಬಜೆಟ್ ನಡೆಯಬೇಕು ಅಂತ ಆದರೆ, ನೀವೇನು ಮಾರ್ಚ್ ಮೊದಲ ಅಥವಾ ಎರಡನೇ ವಾರದಲ್ಲಿ ಬಜೆಟ್ ಅಧಿವೇಶನ ನಡೆಯಬೇಕು ಅಂತ ಸೂಚನೆ ಮಾಡಿದ್ದೀರಿ ಅದು ಸಾಕಾಗುವುದಿಲ್ಲ. ನೀವು ಫೆಬ್ರವರಿ ಮಧ್ಯ ಭಾಗದಿಂದಲೇ ಅಧಿವೇಶನವನ್ನು ಪ್ರಾರಂಭ ಮಾಡಬೇಕಾಗುತ್ತದೆ. ನಾವು ಒಪ್ಪಬೇಕು ಅಂದರೆ ಅದನ್ನು ಸೇರಿಸಬೇಕು. ಯಾಕೆಂದರೆ 35 ಇಲಾಖೆಗಳಿವೆ, ಒಂದೊಂದು ಇಲಾಖೆಗೆ ಕನಿಷ್ಠ ಪೂರ್ತಿಯಾಗಿ ಎರಡು ದಿವಸಗಳಾದರೂ ಚರ್ಚೆಗೆ ಅವಕಾಶ ಮಾಡಿಕೊಡದೇ ಹೋದರೆ ಸರಿಯಾಗುವುದಿಲ್ಲ. ಯಾಕೆಂದರೆ ಸಾವಿರಾರು ಕೋಟಿ ರೂ. ಬಜೆಟ್ ಇಲ್ಲಿ ಮಂಜೂರಾಗಬೇಕು.

ಅಂಥದ್ದನ್ನು ಅರ್ಧ ಗಂಟೆಯಲ್ಲಿ ಎಲ್ಲಾ ಡಿಮಾಂಡ್ಸ ಮೇಲೂ ಮಾತನಾಡಿ ಮುಗಿಸಿಬಿಡಿ ಅಂತ ಹೇಳುವ ಸ್ಥಿತಿ ಈ ಸದನಕ್ಕೆ ಬರಬಾರದು ಅಂತ ನಾನು ನಿನ್ನೆ ಕೂಡ ಮಾತನಾಡುವಾಗ ಹೇಳಿದ್ದೇನೆ. ಅದು ನಾವೆಲ್ಲರೂ ಪ್ರಜಾಪ್ರಭುತ್ವಕ್ಕೆ ಮಾಡುವ ಅಪಚಾರ. ಯಾಕೆಂದರೆ ಇದು ಅತ್ಯುನ್ನತವಾದ ಸ್ಥಾನ ಮತ್ತು ಎಲ್ಲವೂ ಇಲ್ಲಿ ತೀರ್ಮಾನವಾಗಬೇಕಾಗುತ್ತದೆ. ಈಗ ವಿಕೇಂದ್ರೀಕರಣದ ಹೆಸರಿನಲ್ಲಿ ಅಲ್ಲಿ ಸ್ವಲ್ಪ ಕೆಲಸ ಕಡಿಮೆ ಕೊಡುತ್ತಿದ್ದೇವೆನ್ನುತ್ತಿದ್ದೀರಿ ನೀವು. ಆ ಸಂದರ್ಭದಲ್ಲಿ ಇದನ್ನು ಹೆಚ್ಚು ಮಾಡಿರಿ. ಏಕೆಂದರೆ ಇಲಾಖೆಗಳಿಗೆ ಸಾವಿರಾರು ಕೋಟಿ ರೂ. ಬಜೆಟನ್ನು ಮಂಜೂರು ಮಾಡಬೇಕಾದರೆ ಕೂಲಂಕಷವಾಗಿ ಪ್ರತಿಯೊಂದು ಅಂಶದ ಬಗ್ಗೆಯೂ ಚರ್ಚೆ ಮಾಡತಕ್ಕಂತಹ ಅವಕಾಶವಿಲ್ಲದೆ ಗಿಲಟಿನ್ ಮಾಡುವುದು ಸರಿಯಲ್ಲ. ನಿನ್ನೆ 25 ಜನರನ್ನು ಅರ್ಧ ಗಂಟೆಯಲ್ಲಿ ಮಾತನಾಡಿ ಮುಗಿಸಬೇಕು ಎನ್ನುತ್ತಾರೆ. ಹೇಳಿ ಅಧ್ಯಕ್ಷರೇ, ಹೀಗಾದರೆ ಅದಕ್ಕೆ ನ್ಯಾಯ ಒದಗಿಸಲು ಆಗುತ್ತದೆಯೆ? ಆದ್ದರಿಂದ ಬಜೆಟ್ ಅಧಿವೇಶನವನ್ನು ಕನಿಷ್ಠ 40 ದಿವಸಕ್ಕೆ ನೀವು ನಿಗದಿ ಪಡಿಸಲೇಬೇಕು. ಪೂರ್ಣ ಬಜೆಟನ್ನೂ ಮಂಡಿಸಲಿಕ್ಕೆ, ಈಗ ಪಾರ್ಲಿಮೆಂಟಿನಲ್ಲಿ ಫೆಬ್ರವರಿ 28ಕ್ಕೆ ಅಂತ ಮಾಡಿದ್ದಾರೆ ಆ ರೀತಿಯಲ್ಲಿ ನೀವೂ ನಿಗದಿಮಾಡಿ, ಮಾರ್ಚಿ ತಿಂಗಳಲ್ಲಿ ಇಂಥ ತಾರೀಖು ಅಂತ. ಮಾರ್ಚಿ 30ರವರೆಗೆ ಇಟ್ಟುಕೊಂಡಿದ್ದು ಬಜೆಟ್ ಮಂಡಿಸಿಬಿಟ್ಟು ಆಮೇಲೆ ಟೈಮಿಲ್ಲ ಚರ್ಚೆ ಮಾಡುವುದಕ್ಕೆ ಅಂತ ಹೇಳಿ ಲೇಖಾನುಸಾರ ಪಡೆದುಕೊಂಡು ಹೋಗುವುದು ಇದು ಪ್ರಜಾಪ್ರಭುತ್ವದಲ್ಲಿ ಆರೋಗ್ಯಕರವಾದ ಅಂಶವಲ್ಲ. ಇದು ಬಹಳ ಮುಖ್ಯವಾಗಿ ತಿದ್ದುಪಡಿಯಾಗಬೇಕಾದ ವಿಚಾರ. ಮತ್ತೆ ಮಾನ್ಯ ಮಾಧುಸ್ವಾಮಿಯವರು ಹೇಳಿದಂತಹ ವಿಚಾರವನ್ನು ನಾನೂ ಕೂಡ ಸಮರ್ಥಿಸುತ್ತೇನೆ. 'ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಶಿಫಾರಸ್ಸು ಮಾಡಬಹುದು' ಎಂಬ ಕಲಂ ಏನಿದೆ ಇದನ್ನು ಪೂರ್ತಿಯಾಗಿ ತೆಗೆಯಬೇಕು. ಅಂದರೆ ಮತ್ತು ಪರಂತು ಮೇಲೆ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಪೂರ್ಣ ಅಧಿವೇಶನ ನಡೆಸುವಷ್ಟು ಸರ್ಕಾರಿ ಕಾರ್ಯಕಲಾಪಗಳು ಇಲ್ಲದಿದ್ದರೆ ಸದನವನ್ನು ಮುಂದೂಡಬಹುದು ಮತ್ತು ಒಂದು ಅಧಿವೇಶನದ ಕನಿಷ್ಠ ಸಂಖ್ಯೆಯ ದಿನಗಳಿಗಿಂತಲೂ ಕಡಿಮೆ ಬಿದ್ದ ದಿನಗಳಲ್ಲಿ ಅದೇ ವರ್ಷದಲ್ಲಿ ತರುವಾಯದ ಅಧಿವೇಶನಗಳಲ್ಲಿ ಭಾಗಶಃ ಅಥವಾ ಪೂರ್ಣವಾಗಿ ಸರಿದೂಗಿಸಿಕೊಳ್ಳತಕ್ಕಂಥಾದ್ದು ಎಂದು ಇದೆ. ಆದರೆ ಇದಕ್ಕೇನೂ ಸಪೋರ್ಟಿಂಗಿಲ್ಲ ಅದು. ಹಾಗಾಗಿ ನೀವಿದನ್ನು ತೆಗೆಯದೇ ಹೋದರೆ ವಿಧೇಯಕದ ಮುಖ್ಯ ಉದ್ದೇಶವೇ ವಿಫಲವಾಗುತ್ತದೆ. ಯಾಕೆಂದರೆ ಇವತ್ತು ಪ್ರಜಾಪ್ರಭುತ್ವದಲ್ಲಿ ವಿಭಿನ್ನ ರಾಜಕೀಯ ಪಕ್ಷಗಳು ಸೇರಿ ಈ ತರಹ ಸಮ್ಮಿಶ್ರ ಸರ್ಕಾರಗಳು ಬರತಕ್ಕಂಥ ಲಕ್ಷಣಗಳಿವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಾಕಷ್ಟು ಬಿಜೆನೆಸ್ ಇಲ್ಲದೆ ಹೋದರೆ ಮುಂದಕ್ಕೆ ಹಾಕಬೇಕು, ಆ ದಿನಗಳನ್ನು ಮುಂದೆ ಅಡ್ಜಸ್ಟ್ ಮಾಡಬಹುದು ಅಂತ ಇದೆ.

ಶ್ರೀ ಜೆ.ಸಿ. ಶ್ರೀರಾಮರೆಡ್ಡಿ : ಅದಕ್ಕೆ ನಮ್ಮ ತಕರಾರಿಲ್ಲ, ಆದರೆ ಮೇಲ್ಗಡೆ ಇರುವುದು ಏನೆಂದರೆ ಪರಂತು ರಾಜ್ಯಸರ್ಕಾರವು ಸಮಿತಿಯ ಸಲಹೆ ಮೇರೆಗೆ ರಾಜ್ಯ ವಿಧಾನಮಂಡಲದ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸುವ ದಿನಗಳ ಸಂಖ್ಯೆಯನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಶಿಫಾರಸ್ಸು ಮಾಡಬಹುದು. ಅಂತ ಏನಿದೆ ಇದಕ್ಕೆ ನಮ್ಮ ಆಕ್ಷೇಪಣೆ. ಇದನ್ನು ದಯವಿಟ್ಟು ತೆಗೆಯಬೇಕು. ಮತ್ತೆ ಇನ್ನೊಂದು ಬಹಳ ಮುಖ್ಯವಾದದ್ದು. ವಿಧಾನಪರಿಷತ್ತು ವಿಧಾನಸಭೆ ನಡೆಯುವ ತಾರೀಖುಗಳು ಬದಲಾಗಬೇಕು. ಮತ್ತು ವಿಧಾನಪರಿಷತ್ತಿನ ದಿನಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಯಾಕೆಂದರೆ

ಇದು ಕೆಳಮನೆ, ಇಲ್ಲಿ ಪ್ರಸ್ತಾಪವಾಗುವ ಮೊದಲೇ ಅಲ್ಲಿ ಪ್ರಸ್ತಾಪವಾಗಿಬಿಟ್ಟಿರುತ್ತದೆ. ಮೊನ್ನೆ ನೀವೇ ನೋಡಿದಿರಿ, ಬಡ್ಡಿ ಮನ್ನಾ ವಿಚಾರದಲ್ಲಿ ನಾನು ಅಲ್ಲಿ ಹೇಳಿಕೆ ಕೊಟ್ಟು ಬಂದುಬಿಟ್ಟಿದ್ದೇನೆ, ಅದಕ್ಕೋಸ್ಕರ ಇಲ್ಲಿ ಅದನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ ಅಂತ ಮಾನ್ಯ ಹಣಕಾಸು ಸಚಿವರು ಇಲ್ಲಿ ಹೇಳಿಬಿಟ್ಟರು. ಇಂತಹ ಪರಿಸ್ಥಿತಿಗಳು ನಿರ್ಮಾಣವಾಗುತ್ತವೆ. ನಾವಿಲ್ಲಿ ಯಾವುದೋ ವಿಚಾರ ಚರ್ಚೆ ಮಾಡುವ ಮೊದಲೇ ಅಲ್ಲಿ ಚರ್ಚಿಸುತ್ತಾರೆ. ಇಂತಹ ಸಮಸ್ಯೆ ಮತ್ತು ಗೊಂದಲಗಳುಂಟಾಗುತ್ತವೆ. ಹಾಗಾಗಿ ವಿಧಾನಪರಿಷತ್‌ನ ಅಧಿವೇಶನದ ಸಮಯವನ್ನು ಸ್ವಲ್ಪ ಹೆಚ್ಚು ಕಡಿಮೆ ಮಾಡಬೇಕು ಮತ್ತು ದಿನಗಳನ್ನೂ ಕೂಡ ಕಡಿಮೆ ಮಾಡಬೇಕು. ಇಲ್ಲದಿದ್ದರೆ ಇದರ ಮಹತ್ವ ಹೋಗಿ ಬಿಡುತ್ತದೆ, ಈ ಸಭೆಯ ಮಹತ್ವ ಹೋಗಿಬಿಡುತ್ತದೆ. ಇದು ನೇರವಾಗಿ ಜನರಿಂದ ಆಯ್ಕೆಯಾದ ಸದನ. ಇದಕ್ಕೆ ಹೆಚ್ಚು ಶಕ್ತಿಯಿರಬೇಕು, ಇದರ ಮಹತ್ವವನ್ನು ಕಡಿಮೆ ಮಾಡಬಾರದು. ಇದನ್ನೂ ಕೂಡ ಈ ತಿದ್ದುಪಡಿಯಲ್ಲಿ ತರಬೇಕು. ಆಮೇಲೆ ಈ ಬಿಲ್ಲನ್ನು ನೀವು ಮಂಡಿಸಬೇಕು; ಇಲ್ಲಿ, ಇದನ್ನು ತೆಗೆಯುವುದಿಲ್ಲ ಅಂದರೆ ಈ ಬಿಲ್ಲನ್ನು ಮಂಡಿಸುವ ಅವಶ್ಯಕತೆ ಇಲ್ಲ. ಸರ್ಕಾರವೇ ಸುಪೀರಿಯರ್ ಅಥಾರಿಟಿ, ಎಷ್ಟು ದಿವಸ ನಡೆಯಬೇಕು ಎಂಬುದು ಕಡೆಗೆ ಸರ್ಕಾರದ ಕೈಗೆ ಹೋಗುತ್ತದೆ, ಸರ್ಕಾರ ಅಂದರೆ ಮತ್ತೆ ಅಧಿಕಾರಿಗಳು, ಅವರು ಸಲಹೆ ಮಾಡಿದಂತೆ ತೀರ್ಮಾನವಾಗಿಬಿಡುತ್ತದೆ. ಆದ್ದರಿಂದ ಅದನ್ನು ದಯವಿಟ್ಟು ತೆಗೆಯಬೇಕು, ತೆಗದು ಈ ಬಿಲ್ಲನ್ನು ಪಾಸ್ ಮಾಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಅಧ್ಯಕ್ಷರೇ, ಮೊನ್ನೆ ನಾನು ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾದ ದಿವಸವೇ ಈ ವಿಷಯವನ್ನು ಹೇಳಿದೆ. ಲೇಖಾನುದಾನ ಅಂತ ಪಡೆಯುವುದು ಅಪರೂಪದ ಪ್ರಸಂಗದಲ್ಲಿ ಮಾತ್ರ. ಹೊಸ ಸರ್ಕಾರ ಬಂದಾಗ ಅಥವಾ ಬೇರೆ ಯಾವುದೋ ಒಂದು ಸಮಸ್ಯೆ ಉದ್ಭವಿಸಿದಾಗ ಬಿಟ್ಟರೆ ಪ್ರತಿವರ್ಷವೂ ಲೇಖಾನುದಾನ ತೆಗೆದುಕೊಳ್ಳುವುದು ಪುನಃ ಬೇಡಿಕೆಗಳ ಮೇಲೆ ಚರ್ಚೆಯಾಗುವಂಥದ್ದು ಇದು ರಿಪಿಟಿಶನ್ ಆಗುತ್ತದೆ. ಅಲ್ಲಿ ಏನು ಮಾಡುತ್ತೇವೆ ಪುನಃ ಇಲ್ಲಿ ಚರ್ಚೆ ಮಾಡುವುದು, ಆಗುವುದೆ. ಅದಕ್ಕಿಂತ ಈ ಸಮಯವನ್ನು ಬೇರೆ ಯಾವುದಾದರೂ ಕಾರ್ಯಕಲಾಪಗಳಿಗೆ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಮೊದಲು ರಾಜ್ಯಪಾಲರ ಭಾಷಣ, ಆಮೇಲೆ ಬಜೆಟ್ ಮಂಡನೆಯನ್ನು ಬೇಗ ಮಾಡಿ ಹೆಚ್ಚು ದಿನಗಳನ್ನು ಚರ್ಚೆಗೆ ಅವಕಾಶ ಮಾಡಿಕೊಡಬೇಕು ಅಂತ ನನ್ನ ಅಭಿಪ್ರಾಯ. ಇಲ್ಲಿ ತಾವು ಸಮಿತಿ ರಚನೆ ಮಾಡಿದ್ದರಲ್ಲಿ ಪ್ರಾಯಶಃ ಅದು ನನ್ನದೂ ಅಭಿಪ್ರಾಯ. ಶಾಸಕಾಂಗದವರು ಯಾರನ್ನಾದರೂ ಸೇರಿಸಿಕೊಳ್ಳುವಂಥದ್ದು, ಆದರೆ 5 ರಲ್ಲಿ 'ಅಧ್ಯಕ್ಷರ ಹೊರತಾಗಿ ಸಮಿತಿಯ ಯಾವೊಬ್ಬ ಸದಸ್ಯನೂ ಗೈರುಹಾಜರಿ ಸಮಿತಿಯ ವಿವರಣೆಗೆ ಅಸಿಂಧುಗೊಳಿಸತಕ್ಕದ್ದಲ್ಲ' ಎಂದಿದೆ. ಕಾರ್ಯದರ್ಶಿ ಆದರೂ ಬೇಡವೆ? ಅವರು, ನಿಮ್ಮ ಸಮಿತಿಯಲ್ಲಿದ್ದಾರೆ ನಿಮ್ಮ ಕೋರಂಗೆ ಕೇವಲ ಅಧ್ಯಕ್ಷರಿದ್ದರೆ ಸಾಕಾಗುತ್ತದೆಯೇ ಎನ್ನುವುದನ್ನು ತಾವು ನೋಡಬೇಕಾಗುತ್ತದೆ. ಮತ್ತೆ 7 ರಲ್ಲಿ ಸಬ್‌ಸೆಕ್ಷನ್ (2) ಎಲ್ಲರೂ ಹೇಳಿದಂತೆ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಕನಿಷ್ಠ 75 ದಿವಸಗಳು ಅಥವಾ ಹೆಚ್ಚು ಅಂತ ಮಾಡಬೇಕು, ಕಮ್ಮಿ ಅಂತ ಆಗಬಾರದು. ಕನಿಷ್ಠ 75 ದಿವಸಗಳ ಅಥವಾ ಹೆಚ್ಚು ಆಗಬೇಕು. ಅಂತ ಕಮ್ಮಿ ಮಾಡುವುದಾದರೆ the whole purpose will be defeated. ಅದು ಇಷ್ಟು ದಿವಸಗಳ ಕಾಲ ಕಾರ್ಯಕಲಾಪ ಆಗದಿದ್ದಾಗ ಏನು ಎನ್ನುವುದರ ಬಗ್ಗೆ ಚರ್ಚೆಗೆ It is subject for debate.

ಮಾಡದಿದ್ದರೆ ಏನು ಎನ್ನುವಂಥದ್ದು. ಈಗ ನಾವು ನಮ್ಮ ಮೇಲೆ ಕಡಿವಾಣವನ್ನು ಹಾಕಿಕೊಂಡಿದ್ದೇವೆ. ಮಾಡಲೇಬೇಕು ಎಂದು ಸರ್ಕಾರ ಹಾಕಿಕೊಂಡಿದೆ. ಆದರೆ ಮಾಡದೇ ಇದ್ದಾಗ ಏನು ಎನ್ನುವಂಥದ್ದು. ಮಾಡದಿದ್ದರೆ ಏನು ಎಂದು ಇಲ್ಲದಿದ್ದರೆ, ಹೇಗೆ? default clause ಏನು ಎಂದು ಬೇಕಾಗುತ್ತದೆ. ಮತ್ತೆ ಇನ್ನೊಂದು ವಿಷಯ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ವಿಷಯವನ್ನು ನಾನು ಒಪ್ಪುತ್ತೇನೆ. ಎರಡೂ ಸದನಗಳು ಒಟ್ಟಿಗೆ ಪ್ರಾರಂಭವಾಗುವ ಬಗ್ಗೆ ಮಾನ್ಯ ಮಾಧುಸ್ವಾಮಿಯವರು, ಶ್ರೀರಾಮರೆಡ್ಡಿಯವರು ನಾವೆಲ್ಲಾ ಚರ್ಚೆಯನ್ನು ಮಾಡಿದ್ದೆವು. ಎಲ್ಲಾ ಚರ್ಚೆಯಾಗಿ ಅಲ್ಲಿಂದ ಉತ್ತರ ಬಂದಮೇಲೆ ಇಲ್ಲಿ ನಾವು ಚರ್ಚೆಯನ್ನು ಮಾಡಿದರೆ ಅದಕ್ಕೆ ಅರ್ಥಬರುವುದಿಲ್ಲವೆಂದು ನನ್ನ ಅಭಿಪ್ರಾಯ. ಅದಕ್ಕೋಸ್ಕರ ಇಲ್ಲಿ ಪ್ರಾರಂಭವಾಗಿ ಹತ್ತು ದಿವಸಗಳ ನಂತರ ಅಲ್ಲಿ ಪ್ರಾರಂಭವಾದರೆ ಒಳ್ಳೆಯದು. ಏಕೆಂದರೆ ಅಲ್ಲಿ ಸದಸ್ಯರ ಸಂಖ್ಯೆ ಕಡಿಮೆ. ಅವರಿಗೆ ಅವಕಾಶಗಳು ಜಾಸ್ತಿ. ಇಲ್ಲಿ ಸದಸ್ಯರ ಸಂಖ್ಯೆ ಕೂಡ ಜಾಸ್ತಿ. ಫೈನಾನ್ಸ್ ಬಿಲ್ ಕೂಡ ಮೊದಲು ಇಲ್ಲಿಯೇ ಚರ್ಚೆಯಾಗಬೇಕು ಮತ್ತು ಅದಕ್ಕೆ ಇಲ್ಲಿಯೇ ಉತ್ತರವನ್ನು ಹೇಳಬೇಕಾಗುತ್ತದೆ. ಅದು ನಂತರ ಅಲ್ಲಿಗೆ ಹೋಗುತ್ತದೆ. ಆದುದರಿಂದ ಪ್ರಥಮ ಎಲ್ಲವೂ ಇಲ್ಲಿಯೇ ಚರ್ಚೆಯಾಗಿ ಅಲ್ಲಿಗೆ ಹೋಗಬೇಕೆನ್ನುವ ವ್ಯವಸ್ಥೆ ಆಗಬೇಕಾದರೆ ಇಲ್ಲಿ ಪ್ರಾರಂಭವಾಗಿ ಆ ನಂತರ ಹತ್ತು ದಿವಸಗಳ ನಂತರ ವಿಧಾನಪರಿಷತ್ತಿನ ಸದನ ಪ್ರಾರಂಭವಾಗಬೇಕು. ತಾವು ವಿಧಾನಪರಿಷತ್ತಿನಿಂದ ಬಂದಿದ್ದೀರಿ, ನಮಗೆ ಗೌರವ ಇಲ್ಲವೆಂದಲ್ಲ. ಆ ಒಂದು ಸಮಸ್ಯೆ ಬಗ್ಗೆ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ಸಹಾ ತಾವು ಆಲೋಚನೆಯನ್ನು ಮಾಡಬೇಕೆಂದು ಹೇಳುತ್ತೇನೆ. ಈ ಬಿಲ್ಲನ್ನು ತಂದ ಉದ್ದೇಶವೇನೂ ಒಳ್ಳೆಯದು. ಆದರೆ ಸ್ವಲ್ಪ ಬದಲಾವಣೆಯನ್ನು ಮಾಡಿ, ತಿದ್ದುಪಡಿಯನ್ನು ಮಾಡಿ ತರಬೇಕೆಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ.

11. ಪ್ರಕಟಣೆ

ಅಧ್ಯಕ್ಷರು : ಒಂದು ಪ್ರಕಟಣೆ ಇದೆ. ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು 2005ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (2) ವಿಧೇಯಕವನ್ನು ದಿನಾಂಕ: 29–7–2005 ರಂದು ಯಾವುದೇ ತಿದ್ದುಪಡಿಗಳು ಇಲ್ಲದೆ ಅಂಗೀಕರಿಸಲಾಗಿದೆ" ಎಂದು ತಿಳಿಸಿರುತ್ತಾರೆ.

12. ಶಾಸನ ರಚನೆ

ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ (ಮುಂದು) 198

ಕರ್ನಾಟಕ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕ 2005. (ಮುಂದುವರೆದ ಚರ್ಚೆ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ನಾನು ಸಹಾ ಸ್ವಾಗತಿಸುತ್ತಾ ಇದು ಬಹಳ ಒಳ್ಳೆಯದು. ಆದರೆ ನನಗೆ ಗೊತ್ತಿರುವ ಹಾಗೆ ನಾನು ಬೇರೆ ಬೇರೆ ಸಮಿತಿಯಲ್ಲಿಯೂ ಚರ್ಚೆ ಮಾಡಿದ ಹಾಗೆ, ಬೇರೆ ಬೇರೆ ಸಂದರ್ಭದಲ್ಲಿ ನೋಡಿದಂತೆ ಬಹುಶಃ ಇಡೀ ದೇಶದಲ್ಲಿಯೇ ಈ ರೀತಿ ಒಂದು ಬಿಲ್ಲನ್ನು ತರುತ್ತಿರುವಂಥದ್ದರಲ್ಲಿ ನಮ್ಮದು ಮೊದಲನೇ ರಾಜ್ಯ ಇರಬಹುದು. ಏಕೆಂದರೆ ಬೇರೆ ಬೇರೆ ರಾಜ್ಯದಲ್ಲೆಲ್ಲಾ ಎಷ್ಟೆಷ್ಟು ದಿನ ಅಧಿವೇಶನ ನಡೆಯುತ್ತದೆ